"ಥೋ ಅದೆಲ್ಲಾ ನಾವು ನೋಡಿಕ್ಯಂತವಿ ನೀ ಸುಮ್ಮನಿರಪ್ಪಜಿ..."

"ಏ ನೀ ಯಾವದೇ ಕಾರಣಕ್ಕೂ ಊರಿಗೆ ಒಯ್ಯಂಗಿಲ್ಲ ಕಣಮಾ... ಸುಮ್ನ ತಮಾಷಿ ಮಾಡಬ್ಯಾಡ... ಅಲ್ಲಿ ಮಣ್ಣ್ ಮಾಡದು ಬ್ಯಾಡ..."

ಇಷ್ಟು ಹೊತ್ತಿಗೆ ಇಡೀ ಪ್ರಸಂಗದ ಅಸಂಬದ್ಧತೆಯಿಂದ ನನಗೆ ರೇಗಿ ಹೋಗಿತ್ತು... ಅಲ್ಲ ಎಷ್ಟೋ ಜನಗಳು ಸಾಯುವುದರ ಬಗ್ಗೆ ಮಾತನಾಡಲೂ ಹಿಂದೆಮುಂದೆ ನೋಡುತ್ತಾರೆ. ಆದರೆ ನಮ್ಮ ಊರಿನ ಕೆಲವು ಜನ ಹಾಗಲ್ಲ. ಸಾವು ಎನ್ನುವುದು ಅಂಗಡಿಗೆ ಹೋಗಿ ಬಂದ ಹಾಗೆ... ವ್ಯಾಪಾರ ಇದ್ದವರು ಹೋಗುತ್ತಾರೆ. ಹೋದವರು ವ್ಯಾಪಾರ ಮುಗಿಸಿಯೇ ಬರುತ್ತಾರೆ ಎನ್ನುವ ಹಾಗೆ...

ಇದರ ಬಗ್ಗೆ ಒಂದಷ್ಟು ದುಃಖ, ಹಳಹಳಿಕೆ ಎಷ್ಟಾದರೂ ಆರ್ದ್ರತೆ... ವಿರಳ ಅಂತಲ್ಲ... ಅವೆಲ್ಲವೂ ಸಂಚಾರಿ ಭಾವಗಳು. ಸ್ಥಾಯೀ ಭಾವವೆಂದರೆ ಎಲ್ಲವನ್ನೂ ವಾಸ್ತವದ ನೆಲೆಯಲ್ಲಿ ನೋಡುವುದು.

"ಅಪಜಿ ನೀ ಇನ್ನೂ ಹೋಗಿಲ್ಲ... ಹೋದಾಗ ಏನಾಕತೋ ಅದು ಮಾಡ್ತವಿ... ನೀ ಸುಮ್ಮನಿರು ಈಗ ಸದ್ಯಕ್ಕೆ ಇನ್ನೊಂದು ದ್ವಾಸಿ ಬೇಕಾ? ಇಲ್ಲಾ ಸಾಕಾ?"

ನಶ್ವರವಾದ ಶರೀರಕ್ಕೆ ಗರಿ ಗರಿ ದೋಸೆಯನ್ನು ತುಂಬಿಸಿ ಅವರು ಹೊರಡಲು ತಯಾರಾಗುತ್ತಿದ್ದುದು ದೇಹದಾನದ ಮೀಟಿಂಗಿಗೆ. ನನ್ನ ಕೆಲಸ ಅಲ್ಲಿಗೆ ಕರೆದುಕೊಂಡು ಹೋಗುವುದು. ಯಾವ ಕಾಲೇಜಿಗೆ ದೇಹದಾನ ಪತ್ರ ಬರೆದುಕೊಟ್ಟಿದ್ದರೋ ಅಲ್ಲಿ ವರ್ಷಕ್ಕೊಮ್ಮೆ ದೇಹದಾನಿಗಳನ್ನು ಕರೆದು ಒಂದು ಮಧ್ಯಾಹ್ನ ಊಟ ಹಾಕುತ್ತಿದ್ದರು. ನನಗಂತೂ ವರ್ಷ ವರ್ಷ ಕರೆದುಕೊಂಡು ಹೋಗುವಾಗ ಇದೆಂಥಾ ವ್ಯಂಗ್ಯ ಅನ್ನಿಸುತ್ತಿತ್ತು. ಕಾಲೇಜಿನವರು ಮುಂದಿನ ವರ್ಷ ಎಷ್ಟು ದೇಹ ಬರಬಹುದು ಎಂಬ ಅಂದಾಜು ಲೆಕ್ಕ ಹಾಕಲು ಕರೆಯುತ್ತಿದ್ದರೋ ಅಥವಾ ಇವರೆಲ್ಲಾ ಇನ್ನೊಬ್ಬರಿಗೆ ಸ್ಫೂರ್ತಿಯಾಗಲಿ ಎಂದು ಮಾಡುತ್ತಿದ್ದರೋ ದೇವರಿಗೇ ಗೊತ್ತು.

ಎರಡು ಮೂರು ವರ್ಷ ಕರೆದುಕೊಂಡು ಹೋಗಿದ್ದೆ. ವಾಕಿಂಗ್ ಸ್ಟಿಕ್ಕು ಹಿಡಿದು, ಹಲ್ಲಿನ ಸೆಟ್ಟು ಫಳಫಳಿಸುತ್ತಾ ಇವರ ನಡುವೆ ನಡೆಯುವ ಮಾತುಗಳು ಯಾವ ಜಗತ್ತಿನವೊ ಎನ್ನಿಸುತ್ತಿದ್ದವು...

ವ್ಯಕ್ತಿ 1: "ಮಿಸ್ಟರ್ ಬಸ್ರಾಜು? ಕಾಣ್ತಿಲ್ಲಲ್ಲ?"

ವ್ಯಕ್ತಿ 2: "ಹಾ ಲಾಸ್ಟ್ ಟೈಮು ಇದ್ರಲ್ಲ ಸಾ."

ವ್ಯಕ್ತಿ 3: "ಸಾ ಅವ್ರು ಬಾತ್ರೂಮಲ್ಲಿ ಬಿದ್ದದ್ದೇ ನೆಪ ಸಾ... ರಿಕವರ್ ಆಗಲೇ ಇಲ್ಲ... ಒಂದು ತಿಂಗಳಾತಂತೆ ಹೋಗಿ..."

ವ್ಯಕ್ತಿ 1: "ಓ ಹಂಗಾರೆ ಇಲ್ಲೇ ಕಾಲೇಜಿಗೆ ಬಂದಿರಬೇಕು..."

ವ್ಯಕ್ತಿ 2: "ಹೂ ಸಾ... ಇಲ್ಲಿಗೇ ತಂದರು..."

ವ್ಯಕ್ತಿ 3: "ಊಟ ಮುಗಿಸಿ ಹೋಗುವಾಗ ನೋಡಿಕಂಡು ಹೋಗನ ಹಂಗಾರೆ... ಆಗಲೇ ಪ್ರಿಸರ್ವ್ ಮಾಡಿರತರೆ."

ಇದು ಹೊಸ ಜೀವನ ದೃಷ್ಟಿ ಇರಬಹುದೇ? ಯಾಕೋ ಕಸಿವಿಸಿ ಎನ್ನಿಸಿ ನನ್ನ ಪಾಡಿಗೆ ನಾನು ದೂರ ಕೂತಿರುತ್ತಿದ್ದೆ.

ಮೂರನೇ ವರ್ಷ ಕರೆದುಕೊಂಡು ಹೋಗುವಾಗ ನನ್ನ ತಂದೆಯ ಜೊತೆ ನಮ್ಮ ಸಂಬಂಧಿ ಒಬ್ಬರು, ನಮ್ಮ ಅಜ್ಜನ ಸ್ನೇಹಿತರು ಬರುತ್ತೇನೆ ಎಂದು ಹಟ ಹಿಡಿದು ಬಂದರು. ಅವರು ನನ್ನ ತಂದೆಗಿಂತ ಕನಿಷ್ಠ ಹದಿನೈದು ವರ್ಷ ದೊಡ್ಡವರು. ಶಿಸ್ತಿನ ಮನುಷ್ಯ. ಯಾವುದೋ ಕಾರಣಕ್ಕೆ ಅವಿವಾಹಿತರಾಗಿ ಉಳಿದಿದ್ದರು. ಆರೋಗ್ಯ ಬಹಳ ಚೆನ್ನಾಗಿ ಕಾಪಾಡಿಕೊಂಡಿದ್ದರು. ನಮ್ಮ ಸುತ್ತಲಿನಲ್ಲೇ ಅಪರೂಪದ ಮನುಷ್ಯ. ಗಾಂಧೀವಾದಿ. ನಿಷ್ಠುರವಾದಿ. ಎಷ್ಟರ ಮಟ್ಟಿಗೆ ಎಂದರೆ ತಮ್ಮ ಕೊನೆಯ ಕಾರ್ಯಗಳಿಗೆ ದುಡ್ಡು ಹೊಂದಿಸಿ ಇಟ್ಟಿದ್ದರು. ಅವರಿಗೆ ನಮ್ಮಪ್ಪ ಯಾವುದೋ ಮಾಯದಲ್ಲಿ ದೇಹದಾನದ ಬಗ್ಗೆ